# ನಗರಸಭಾ ಕಾರ್ಯಾಲಯ, ಮಂಡ್ಯ.

ದಿನಾಂಕ: 09–01–2008

ದಿನಾಂಕ: 09–01–2008 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಹಾಗೂ ಆಡಳಿತಾಧಿಕಾರಿಗಳು, ನಗರಸಭೆ, ಮಂಡ್ಯರವರು ನಡೆಸಿದ ಸಭೆ ನಡವಳಿಕೆಗಳು.

**ವಿಷಯ:1:–** ಮಂಡ್ಯ ನಗರ ಹಾಲಹಳ್ಳಿ ದಲಿತ ಕಾಲೋನಿಯ ರಸ್ತೆಯನ್ನು ಹನಿಯಂಬಾಡಿ ರಸ್ತೆಗೆ ಸಂಪರ್ಕ ಕಲ್ಪಿಸಲು 1) ನಿಂಗಯ್ಯ ಬಿನ್ ಕರೀಗೌಡ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 54/6ಸಿ ರಲ್ಲಿ ಅಳತೆ 219 * 15" = 3285 ಚದರಡಿ ಜಾಗ ಹಾಗೂ 2) ನಾಗಮ್ಮ ಕೋಂ ದೊಡ್ಡ ಲಿಂಗೇಗೌಡರ ಹೊಸಹಳ್ಳಿ ಗ್ರಾಮದ ಸರ್ವೆ ನಂ. 54/6ಬಿ4 ರಲ್ಲಿ 290 * 15 = 4358 ಚದರಡಿ ಜಾಗ ವಶಪಡಿಸಿಕೊಳ್ಳಲು ಹಾಗೂ ಪರಿಹಾರ ನೀಡುವ ಬಗ್ಗೆ ಹಾಗೂ ನಾಗಮ್ಮ ಕೋಂ ದೊಡ್ಡ ಲಿಂಗೇಗೌಡರ ಜಮೀನಿನಲ್ಲಿರುವ ಮರಗಳಿಗೆ ಪರಿಹಾರ ನೀಡುವ ಬಗ್ಗೆ.

**ತೀರ್ಮಾನ:1:–** 1) ನಿಂಗಯ್ಯ ಬಿನ್ ಕರೀಗೌಡ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 54/6ಸಿ ರಲ್ಲಿ ಅಳತೆ 219 * 15" ರ ಜಾಗವನ್ನು 2) ನಾಗಮ್ಮ ಕೋಂ ದೊಡ್ಡ ಲಿಂಗೇಗೌಡರ ಹೊಸಹಳ್ಳಿ ಗ್ರಾಮದ ಸರ್ವೆ ನಂ. 54/6ಬಿ4 ರಲ್ಲಿ 290 * 15" ಜಾಗವನ್ನು ಸಂಪರ್ಕ ರಸ್ತೆ ಕಲ್ಪಿಸಲು ನಿಯಮಾನುಸಾರ ವಶಪಡಿಸಿಕೊಳ್ಳಲು ತೀರ್ಮಾನಿಸಲಾಯಿತು ಹಾಗೂ ವಶಪಡಿಸಿಕೊಂಡ ಜಾಗಕ್ಕೆ ಮಂಡ್ಯ ಉಪನೋಂದಣಾಧಿಕಾರಿಗಳು ನಿಗಧಿಪಡಿಸಿದ ಮೌಲ್ಯದಂತೆ ಸರ್ಕಾರದ ಮಂಜೂರಾತಿ ಪಡೆದು ಪರಿಹಾರ ನೀಡಲು ಒಪ್ಪಲಾಯಿತು ಹಾಗೂ 3) ನಾಗಮ್ಮ ಕೋಂ ದೊಡ್ಡಲಿಂಗೇಗೌಡರ ಜಮೀನಿನಲ್ಲಿರುವ ಮರಗಳಿಗೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಮಂಡ್ಯರವರು ನಿಗಧಿಪಡಿಸಿರುವ ದರದಂತೆ ಪರಿಹಾರವನ್ನು ನಿಯಮಾನುಸಾರ ಪಾವತಿಸಲು ಒಪ್ಪಲಾಯಿತು. 4) ಆರ್.ಎಲ್.ದೊಡ್ಡಲಿಂಗೇಗೌಡ ರವರಿಗೆ ಸೇರಿದ ಎರಡು ನಿವೇಶನಗಳಿದ್ದು ಎ) ಡಿ5/1126/185 ರ 90' * 60' ಬಿ)ಡಿ5/6119/1307ರ 90' * 60' ಈ ನಿವೇಶನಗಳ ಉತ್ತರ ಭಾಗದಲ್ಲಿ ರಸ್ತೆಗಾಗಿ ಬಿಟ್ಟಿರುವ ಜಾಗವನ್ನು ಉಪಯೋಗಿಸಿಕೊಮಡು ರಸ್ತೆ ನಿರ್ಮಿಸಲು ತೀರ್ಮಾನಿಸಲಾಯಿತು.

(ಸಹಿ)
ಆಡಳಿತಾಧಿಕಾರಿಗಳು,
ನಗರಸಭೆ, ಮಂಡ್ಯ.